# ತಂತ್ರಜ್ಞಾನ ಮತ್ತು ಸಾಹಿತ್ಯದ ತರಗತಿಗಳು

**ಅಶ್ವತ್ತಮ್ಮ ಕೆ.**

ಮುಖ್ಯಸ್ಥರು, ಕನ್ನಡ ವಿಭಾಗ, ಅಲ್–ಅಮೀನ್ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಬೆಂಗಳೂರು.

**Received: 05/01/2025 ; Accepted: 15/02/2025 ; Published: 03/03/2025**

**DOI: https://doi.org/10.5281/zenodo.14961451**

## ABSTRACT:

ತರಗತಿಯಲ್ಲಿ ಬಳಸುವ ತಂತ್ರಜ್ಞಾನವು ಬೋಧನಾ ವಿಧಾನಗಳನ್ನು ಹೆಚ್ಚಿಸುವ ಮೂಲಕ, ವಿದ್ಯಾರ್ಥಿಗಳ ಮನಸ್ಸನ್ನು ಉತ್ತೇಜಿಸುವ ಮತ್ತು ವೈಯಕ್ತಿಕಗೊಳಿಸುವ ಮೂಲಕ ಸಾಂಪ್ರದಾಯಿಕ ಶಿಕ್ಷಣವನ್ನು ಪರಿವರ್ತಿಸುತ್ತಿದೆ. ಶೈಕ್ಷಣಿಕ ಅಪ್ಲಿಕೇಶನ್ ಗಳಂತಹ ಡಿಜಿಟಲ್ ಉಪಕರಣಗಳು ಶಿಕ್ಷಕರಿಗೆ ವಿಷಯವನ್ನು ಹೆಚ್ಚು ಕ್ರಿಯಾತ್ಮಕವಾದ ಹಾಗೂ ಸಂವಾದಾತ್ಮಕವಾದ ರೀತಿಯಲ್ಲಿ ಪ್ರಸ್ತುತಪಡಿಸಲು ಅನುವು ಮಾಡಿಕೊಟ್ಟಿದೆ. ಇದಲ್ಲದೆ, ವರ್ಚುವಲ್–ರಿಯಾಲಿಟಿ ಮತ್ತು ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನಗಳು ತಿಳುವಳಿಕೆ ಮತ್ತು ವಿಮರ್ಶಾತ್ಮಕವಾದ ಚಿಂತನೆಯನ್ನು ಆಳಗೊಳಿಸುವ, ತಲ್ಲೀನಗೊಳಿಸುವ ಪರಿಸರವನ್ನು ಸೃಷ್ಟಿಸುತ್ತಿವೆ. ಏನೇ ಆದರೂ, ಚಿಂತನಶೀಲವಾಗಿ ಬಳಸಿದಾಗ ಮಾತ್ರ ತಂತ್ರಜ್ಞಾನವು ಶಿಕ್ಷಣವನ್ನು ಕ್ರಾಂತಿಗೊಳಿಸಬಹುದು, ಕಲಿಕೆಯನ್ನು ಹೆಚ್ಚು ಸುಲಭವಾಗಿ ಮತ್ತು ವೈವಿಧ್ಯಮಯ ವಿದ್ಯಾರ್ಥಿ ಜನಸಂಖ್ಯೆಗೆ ಪರಿಣಾಮಕಾರಿಯಾಗಿಯೂ ತಲುಪಿಸಬಹುದು.

## KEYWORDS:

ವರ್ಚುಯಲ್ ರಿಯಾಲಿಟಿ, ಕೃತಕ ಬುದ್ಧಿಮತ್ತೆ, ಕ್ರಿಯಾತ್ಮಕವಾದ, ಸಂವಾದಾತ್ಮಕವಾದ, ವಿಮರ್ಶಾತ್ಮಕವಾದ.

**ಪೀಠಿಕೆ:**

ಇಂದು ತಂತ್ರಜ್ಞಾನ ಮತ್ತು ಸಾಹಿತ್ಯದ ಮಿಶ್ರಣ ಎಂದರೆ ಇ–ಪುಸ್ತಕಗಳು, ಆಡಿಯೋ ಬುಕ್‌ಗಳು ಮತ್ತು ಸಾಹಿತ್ಯದ ಚರ್ಚಾ ವೇದಿಕೆಗಳಂತಹ ಡಿಜಿಟಲ್ ಪ್ಲಾಟ್ ಫಾರ್ಮಗಳು ಸಾಂಪ್ರದಾಯಿಕ ಸಾಹಿತ್ಯ ಅಧ್ಯಯನಗಳಿಗೆ ಪೂರಕವಾಗಿವೆ.ಈ ಅಪ್ಲಿಕೇಶನ್‌ಗಳು ಮತ್ತು ಸಾಫ್ಟವೇರ್–ಟಿಪ್ಪಣಿ, ಪಠ್ಯಗಳು, ಶಬ್ದಕೋಶದ ಸಹಾಯ ಮತ್ತು ಮಲ್ಟಿ ಮೀಡಿಯಾ ವಿಷಯವನ್ನು ಒದಗಿಸುತ್ತದೆ. ಹಾಗೆಯೇ ಸಾಹಿತ್ಯ ಕೃತಿಗಳೊಂದಿಗೆ ತಿಳುವಳಿಕೆ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಹೆಚ್ಚಿಸುತ್ತದೆ.

ತರಗತಿಗಳಲ್ಲಿ ತಂತ್ರಜ್ಞಾವು ಸಾಹಿತ್ಯದ, ವಿದ್ಯಾರ್ಥಿಗಳನ್ನು ಉತ್ತಮವಾಗಿ

ತೊಡಗಿಸಿಕೊಳ್ಳುವ ಮತ್ತು ಅಂತರ್ಗತ ಶೈಕ್ಷಣಿಕ ಅನುಭವವನ್ನು ಉತ್ತೇಜಿಸುವ ಮೂಲಕ 21ನೆ ಶತಮಾನದ ಸವಾಲುಗಳಿಗೆ ಸಿದ್ಧಪಡಿಸುತ್ತಿದೆ.

ವಿಶ್ವದಾದ್ಯಂತ 5.51 ಬಿಲಿಯನ್ ಇಂಟರ್‌ನೆಟ್ ಬಳಕೆದಾರರು ಮತ್ತು ಅದರಲ್ಲಿ 234 ಮಿಲಿಯನ್ ಜನರು ಸ್ಥಳೀಯ ಭಾಷಾ ಬಳಕೆದಾರರಿದ್ದಾರೆ. 2021 ರ ಸಮಯಕ್ಕೆ ಇಂಟರ್‌ನೆಟ್‌ನಿಂದ 20 ಮಿಲಿಯನ್ ಡಾಲರ್‌ಗಳಷ್ಟು ಹಣವನ್ನು ಸಂಪಾದಿಸಬಹುದು ಎಂದು ಇಂಡಿಯಾ ಮೊಬೈಲ್ ಕಾಂಗ್ರೆಸ್ (ಐಎಂಸಿ) 2017 ರ ಸುದ್ಧಿಯಲ್ಲಿ ಚೇತನ್ ಕೃಷ್ಣಸ್ವಾಮಿ ವರದಿ ಮಾಡಿದ್ದಾರೆ. ಪ್ರಾದೇಶಿಕ ಭಾಷೆಗಳಲ್ಲಿ ಹೆಚ್ಚು ಡಿಜಿಟಲ್ ವಿಷಯವನ್ನು ನಿರ್ಮಿಸುವುದು, ಭಾರತಕ್ಕೆ 1 ಟ್ರಿಲಿಯನ್ ಡಿಜಿಟಲ್ ಅರ್ಥವ್ಯವಸ್ಥೆಗೆ ಬಿಡ್ ನೀಡಲಿದೆ ಎಂದು ಗೂಗಲ್ ಇಂಡಿಯಾ ಸೆಪ್ಟೆಂಬರ್ 27 2021ರಂದು ಹೇಳಿದೆ. ಆದರೆ ಇಂಟರ್‌ನೆಟ್ ಉದ್ಯಮವು ಈ ಅಂಶವನ್ನು ಕೇಂದ್ರೀಕರಿಸಲು ಮತ್ತು ಸ್ಥಳೀಯ ಭಾಷೆಗಳಲ್ಲಿ ವಿಷಯವು ವಾಸ್ತವವಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು. ಇಂಟರ್‌ನೆಟ್ ಮತ್ತು ಅಂತರ್ಜಾಲಗಳು ಅಂತರ್ಗತವಾಗುವುದನ್ನು ಖಾತ್ರಿಪಡಿಸಿಕೊಳ್ಳಲು ಉತ್ಪನ್ನಗಳನ್ನು ಹೊಂದುವಂತೆ ಮಾಡಲಾಗುತ್ತದೆ. ಇದು ಇಂಗ್ಲಿಷ್ ಮಾತನಾಡುವ ಗಣ್ಯರಿಗೆ ಮಾತ್ರ ಉಳಿಯುವುದಿಲ್ಲ. ಗೂಗಲ್ ಮತ್ತು ಕೆಪಿಎಂಜಿ ಇಂಡಿಯಾದ ಕೃಷ್ಣಸ್ವಾಮಿಯವರ ವರದಿಯ ಪ್ರಕಾರ, "ಭಾರತೀಯ ಭಾಷೆಯ ಬಳಕೆದಾರರು ಇಂಗ್ಲಿಷ್ ಭಾಷೆಯನ್ನು ದೇಶದಲ್ಲಿ ಅಂತರ್ಜಾಲದಲ್ಲಿ ಹಿಂದಿಕ್ಕಿವೆ" ಎಂದಿದ್ದಾರೆ, ತಮಿಳು, ಹಿಂದಿ ಕನ್ನಡ, ಬಂಗಾಳಿ ಮತ್ತು ಮರಾಠಿ ಭಾಷೆ ಮಾತನಾಡುವ ಬಳಕೆದಾರರು ಅತಿ ಹೆಚ್ಚು ನೇರ ಸೇವೆಗಳನ್ನು ಹೊಂದಿದ್ದಾರೆ. ನಂತರ ತೆಲುಗು, ಗುಜರಾತಿ ಮತ್ತು ಮಲಯಾಳಂ ಭಾಷೆಗಳಿಗೆ ಸಲ್ಲುತ್ತದೆ.

ಗೂಗಲ್ ಡಿಜಿಟಲ್ ಸಂಸ್ಥೆಯು, 2017ರ ಆರಂಭದಲ್ಲಿ ಅಂಡ್ರಾಯ್ಡ್ ಮತ್ತು ಐ. ಓ. ಎಸ್. ಸಾಧನಗಳಲ್ಲಿ ಡೌನ್ಲೋಡ್ ಮಾಡಬಹುದಾದ ಸ್ವತಂತ್ರ ಡಿಜಿಟಲ್ ಪಾವತಿಗಳ ಅಪ್ಲಿಕೇಶನ್ 'Tez' ಅನ್ನು ಬಿಡುಗಡೆ ಮಾಡಿತು. ಈ ಅಪ್ಲಿಕೇಶನ್ ಅನ್ನು ಭಾರತಕ್ಕಾಗಿ ನಿರ್ಮಿಸಲಾಯಿತು. ನಂತರ ಇದೇ 2018ರಲ್ಲಿ 'ಗೂಗಲ್ ಪೇ' ಆಗಿ ಪರಿವರ್ತಿತವಾಯಿತು. ಈಗ ಇದು ನಮ್ಮ ದೇಶದ ಸ್ಮಾರ್ಟ್ ಫೋನ್‌ಗಳ ಬಹುಪಾಲು ಕೆಲಸವನ್ನು ಮಾಡುತ್ತದೆ.

**ಶಿಕ್ಷಣದಲ್ಲಿ ತಂತ್ರಜ್ಞಾನ:** ಶೈಕ್ಷಣಿಕ ತಂತ್ರಜ್ಞಾನವು ಶಿಕ್ಷಣದಲ್ಲಿ ತಂತ್ರಜ್ಞಾನ ಬೋಧನೆ ಮತ್ತು ಕಲಿಕೆಯನ್ನು ಸುಧಾರಿಸಲು ಡಿಜಿಟಲ್ ಸಾಧನಗಳನ್ನು ಬಳಸುತ್ತದೆ. ತಂತ್ರಜ್ಞಾನದಿಂದ ಶಿಕ್ಷಣವನ್ನು ಇನ್ನೂ ಹೆಚ್ಚು ಸುಧಾರಿಸಲು ಅನುವು ಮಾಡಿಕೊಡುತ್ತದೆ. ಈ ಎಜುಟೆಕ್‌ನ ಉದಾಹರಣೆಗಳು ಹೀಗಿವೆ:

- » ಮೊಬೈಲ್‌ಗಳು: ಟ್ಯಾಬ್ಲೆಟ್, ಲ್ಯಾಪ್‌ಟಾಪ್, ರಸಪ್ರಶ್ನೆಗಳನ್ನು ಸಿದ್ಧಪಡಿಸಿ ಪ್ರತಿಕ್ರಿಯೆಗೋಸ್ಕರ ಬಳಸಬಹುದು.
- » ಗೂಗಲ್ ತರಗತಿಗಳು: ಶಿಕ್ಷಕರು ವಿದ್ಯಾರ್ಥಿಗಳ ಬುದ್ಧಿ ಸಾಮರ್ಥ್ಯವನ್ನು ಅಳೆಯಲು
- » ಆಗಮೆಟೆಂಡ್ ರಿಯಾಲಿಟಿ: (ಎ.ಆರ್.) ವಾಸ್ತವ ಪ್ರಪಂಚಕ್ಕೆ ಗಣಕಯಂತ್ರದ ಸೇರಿಸುವ ಹಾಗೂ ಸಂವಾದ ರೂಪದ ಅನುಭವ
- » ಗ್ಯಾಮಿಫೀಕೇಶನ್: ಶೈಕ್ಷಣಿಕ ಘಟಕಗಳನ್ನು ಆಟದ ರೀತಿಯ ಸ್ವರೂಪಕ್ಕೆ ಪರಿವರ್ತಿಸುವ ವಿಧಾನ
- » ವಿಡಿಯೋ ಉಪನ್ಯಾಸಗಳು: ತರಗತಿಯನ್ನು ಹೊರತುಪಡಿಸಿ, ಉಪನ್ಯಾಸಗಳನ್ನು ವೀಕ್ಷಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುತ್ತದೆ.
- » ಕ್ಲೌಡ್ ಕಂಪ್ಯೂಟಿಗ್: ವಿದ್ಯಾರ್ಥಿಗಳು ತಾವು ಇರುವ ಸ್ಥಳದಲ್ಲೇ, ಸಮಯದಲ್ಲೇ ವಿಶ್ವದ ಯಾವುದೇ ಮೂಲೆಯಿಂದಾದರೂ ತರಗತಿಗಳನ್ನು ಪ್ರವೇಶ ಮಾಡಲು ಅನುವು ಮಾಡಿಕೊಡುತ್ತದೆ.
- » ಗಣಕೀಕೃತ ಪಠ್ಯಪುಸ್ತಕಗಳು: ಸೃಜನಾತ್ಮಕ, ಅಗ್ಗದ ನವೀಕರಿಸಿದ ಪಠ್ಯಪುಸ್ತಕಗಳು ಸಿಗುತ್ತವೆ.

**ಈ ಉಪಕರಣಗಳು ವಿದ್ಯಾರ್ಥಿಗಳಿಗೆ:**

- » ವೈಯಕ್ತಿಕಿಕರಣಗೊಂಡ ಶಿಕ್ಷಣ: ವಿಭಿನ್ನ ರೀತಿಯ ಕಲಿಕೆಯ ಶೈಲಿಯನ್ನು ಅನುವು ಮಾಡಿಕೊಡುತ್ತದೆ.
- » ನವೀಕೃತ ಮಾಹಿತಿ: ವಿದ್ಯಾರ್ಥಿಗಳು ಮಾಹಿತಿಯನ್ನು ತ್ವರಿತವಾಗಿ ಮತ್ತು ಸುಲಭವಾಗಿ ಪ್ರವೇಶ ಮಾಡಬಹುದು.
- » ಕಲಿಕೆಯಲ್ಲಿ ತೊಡಗುವಿಕೆ: ಇಂದು ಆಟದ ಮೂಲಕ ಕಲಿಕೆ ಹೆಚ್ಚು ವಿದ್ಯಾರ್ಥಿಗಳನ್ನು ಸೆಳೆಯುತ್ತದೆ.
- » ಸುಧಾರಿತ ಬೋಧನೆ: ಶಿಕ್ಷಕರು ತಂತ್ರಜ್ಞಾನದ ಮುಖಾಂತರ ಪರಿಣಾಮಕಾರಿಯಾದ ವಿಷಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಬಹುದು.

**ಕೃತಕ ಬುದ್ಧಿಮತ್ತೆ:** ಶಿಕ್ಷಣದ ಒಂದು ಹೊಸ ಆಯಾಮ. ಇದು ಶಿಕ್ಷಣ ಕ್ಷೇತ್ರದಲ್ಲಿ ಪ್ರಮುಖ ಆಟಗಾರನಲ್ಲದೆ ಹೊಸ ದೃಷ್ಟಿಕೋನದೊಂದಿಗೆ, ಆಧುನಿಕ ಬೋಧನೆಗೆ ಆಸಕ್ತಿದಾಯಕವಾದ ಸವಾಲುಗಳನ್ನು ಒಡ್ಡುತ್ತಿದೆ. 'ಪೋರ್ಬ್ಸ್‌ನ' ಅಂಕಿ–ಅಂಶವು ದೇಶದ ಶೇಕಡ 60ರಷ್ಟು ಶಿಕ್ಷಣ ತಜ್ಞರು ಕೃತಕ ಬುದ್ಧಿಮತ್ತೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಿಕೊಂಡಿದ್ದಾರೆಂದು ಹೇಳುತ್ತದೆ.

ಪ್ರತಿ ವಿದ್ಯಾರ್ಥಿಯ ವೈಯಕ್ತಿಕ ಅಗತ್ಯಕ್ಕನುಗುಣವಾಗಿ ಶೈಕ್ಷಣಿಕ ಸಾಮಾಗ್ರಿಗಳನ್ನು ಅಳವಡಿಸಿಕೊಳ್ಳಲು ಸಹಕರಿಸುತ್ತದೆ. ಇದರಿಂದ ಕಲಿಕೆಗೆ ಹೆಚ್ಚು ಪ್ರೇರೆಪಣೆಯನ್ನು ನೀಡುತ್ತದೆ. ಆಟೋಮೇಷನ್ ಮತ್ತು ಅಪ್ಟಿಮೈಷನ್ ನಿಂದ ಪರೀಕ್ಷಾ ವಿಭಾಗಕ್ಕೂ ಮತ್ತು ತರಗತಿಯ ವೇಳಾಪಟ್ಟಿಯನ್ನು ರಚಿಸಲು ಸಹಾಯವಾಗುತ್ತದೆ. ಇಂತಹ ಕಾರ್ಯಗಳಿಂದ ಶಿಕ್ಷಕರ ಸಮಯವನ್ನು ಉಳಿಸುತ್ತದೆ. ಇದು ಶಿಕ್ಷಕರಿಗೆ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ವಿದ್ಯಾರ್ಥಿಗಳೊಂದಿಗೆ ಹೆಚ್ಚಿನ ಸಮಯ

ಸಂವಹನ ಮಾಡಲು ಸಹಾಯವಾಗುತ್ತದೆ.

ಸಂವಹನ ಮಾಡುವ ಸಾಮಾಗ್ರಿಗಳು – ಸಂವಾದವನ್ನೊಳಗೊಂಡ ಪಾಠಗಳು, ಸಿಮ್ಯುಲೇಟರ್‌ಗಳು ಮತ್ತು ವರ್ಚುವಲ್ ತರಗತಿಗಳನ್ನು ರಚಿಸಬಹುದು. ಇದರಿಂದ ಆನ್‌ಲೈನ್ ಕಲಿಕೆ ಹೆಚ್ಚು ಪರಿಣಾಮಕಾರಿಯಾಗಿ ಮೂಡುವಂತೆ ಹಾಗೂ ಅರ್ಥವಾಗುವಂತೆ ಮಾಡಬಹುದು. ಶಿಕ್ಷಕರು ತರಗತಿಗೆ ಬೇಕಾದ ಚಿತ್ರಗಳನ್ನು ತಯಾರಿಸಬಹುದು. ಉದಾಹರಣೆಗೆ ಕೆಲವು ಯೋಜನೆಗಳನ್ನು ತರಗತಿಯಲ್ಲಿ ಪ್ರಸ್ತುತಪಡಿಸಲು ಎ.ಐ. ತಂತ್ರಜ್ಞಾನ ಅನುಕೂಲವಾಗಿದೆ. ಸೃಜನಾತ್ಮತ ಕೆಲಸವನ್ನು ಯಂತ್ರದ ಸಹಾಯವಿಲ್ಲದೆ ಹೆಚ್ಚು ವೇಗವಾಗಿ ಪರಿಹಾರವನ್ನು ನೀಡುತ್ತದೆ.

ಇತ್ತೀಚಿನ ಅಂಕಿ–ಅಂಶಗಳ ಆಧಾರದ ಮೇಲೆ ಕಳೆದ 10 ವರ್ಷಗಳಿಂದ ಇಲ್ಲಿಯತನಕ ಜ್ಞಾನಧಾರಣೆಯ ಮಟ್ಟವು 25% –60% ವರೆಗೆ ಹೆಚ್ಚಾಗಿದೆ. ಇದು ಶಿಕ್ಷಕರ ಬೋಧನಾ ಗುಣಮಟ್ಟವನ್ನು ಸುಧಾರಿಸಲು ಕೊಟ್ಟಂತಹ ಕೊಡುಗೆ ಎನ್ನಬಹುದು.

**ದತ್ತಾಂಶ:** ಶಿಕ್ಷಣ ಕ್ಷೇತ್ರದಲ್ಲಿ ದತ್ತಾಂಶ ಒಂದು ದೊಡ್ಡ ಪ್ರವೃತ್ತಿ. ಇದು ಕಲಿಕೆಯ ವಿವಿಧ ಅಂಶಗಳನ್ನು ದತ್ತೀಕರಿಸಿ, ವಿದ್ಯಾರ್ಥಿಗಳ ಕಾರ್ಯಕ್ಷಮತೆ, ಒಳಗೊಳ್ಳುವಿಕೆ, ಕಲಿಕೆಯ ವಿಶ್ಲೇಷಣೆಗೆ ದಾರಿ ಮಾಡಿಕೊಡುತ್ತದಲ್ಲದೆ, ಫಲಿತಾಂಶಗಳನ್ನು ಊಹಿಸಿ, ಶೈಕ್ಷಣಿಕ ಅನುಭವಗಳನ್ನು ಸರಿಮಾಡಿಕೊಡುತ್ತದೆ. ಇದು ಕಲಿಕೆಯ ವಿಶ್ಲೇಷಣೆಯ ಉತ್ತಮ ಪ್ರಯೋಜನಗಳಲ್ಲಿ ಒಂದು. ವಿದ್ಯಾರ್ಥಿಗಳು ವಿಷಯದೊಂದಿಗೆ ಹೇಗೆ ತೊಡಗಿಸಿಕೊಳ್ಳುತ್ತಾರೆಂಬುದನ್ನು ದತ್ತಾಂಶದ ಮೂಲಕ ತಿಳಿಯಬಹುದು. ಶಿಕ್ಷಣತಜ್ಞರು ತಮ್ಮ ಬೋಧನೆಯನ್ನು ವೈಯಕ್ತಿಕ ಅಗತ್ಯಗಳಿಗೆ ಅನುಗುಣವಾಗಿ ತಿರುಚಬಹುದು. ಪಠ್ಯಕ್ರಮದ ಅಂತರವನ್ನು ಸರಿಪಡಿಸಬಹುದು.

ವರ್ಚ್ಯುವಲ್ ಕಲಿಯುವವರು ಹೆಚ್ಚು ತರಬೇತಿಗೆ ಹೊಂದಿಕೊಂಡಿರುತ್ತಾರೆ. ಅಂದರೆ ಇವರು ಸಾಮಾನ್ಯ ತರಗತಿಗಳಲ್ಲಿ 3.75% ಪಟ್ಟು ಹಾಗೂ 2.3% ಪಟ್ಟು ಇ–ಲರ್ನಿಂಗ್ ತರಗತಿಗಳಲ್ಲಿ ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಶಿಕ್ಷಣದಲ್ಲಿ ತಂತ್ರಜ್ಞಾನವು ನೈಜ ಪ್ರಪಂಚದ ಸನ್ನಿವೇಶಗಳನ್ನು ಅನುಕರಿಸುವ ಮೂಲಕ ತರಬೇತಿಯನ್ನು ಅತ್ಯಂತ ಆಕರ್ಷಯುತವನ್ನಾಗಿ ಮಾಡುತ್ತದೆ. ಈ ತರಬೇತಿಯು ಭಾವನಾತ್ಮಕತೆಯೊಂದಿಗೆ ಕಲಿತದ್ದನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಲು ಸಹಾಯವಾಗುತ್ತದೆ. ಇದನ್ನು ತಮಗೆ ಹೇಗೆ ಬೇಕೊ ಹಾಗೆ ಅನ್ವಯಿಸಿಕೊಳ್ಳಬಹುದು.

**ಬ್ಲಾಕ್‌ಚೈನ್:** ಇದು ಕೇಂದ್ರಿಕೃತ ವ್ಯವಸ್ಥೆಯ ಮೂಲಕ ವಿದ್ಯಾರ್ಥಿ ದಾಖಲೆಯನ್ನು ಮಧ್ಯವರ್ತಿಗಳಿಲ್ಲದೆ ಸುರಕ್ಷಿತಗೊಳಿಸಲಾಗುತ್ತದೆ.

**ತಂತ್ರಜ್ಞಾನ ಮತ್ತು ತರಗತಿ:** ತಂತ್ರಜ್ಞಾನವು ಸಾಂಪ್ರದಾಯಿಕ ತರಗತಿಯ ವ್ಯವಸ್ಥಾಪನೆ, ಮಾನದಂಡ ಆಧಾರಿತವಾದ ಮತ್ತು ವಿದ್ಯಾರ್ಥಿಗಳ ಪ್ರಾವಿಣ್ಯತೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಸಂವಾದಾತ್ಮಕ, ಅರ್ಥಪೂರ್ಣ ಮತ್ತು ಅರಿವಿನ ಮೂಲಕ ಕಲಿಕೆಯ ಅನುಭವಗಳ ಮೂಲಕ ಭಾಷೆಯನ್ನು ಬೋಧಿಸುವುದು. ಅರ್ಹ ಭಾಷೆಯ ಶಿಕ್ಷಕರಿಂದ ತರಬೇತಿಗೊಳಿಸಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

**ಅಂತರ್‌ಜಾಲದಲ್ಲಿ ಸಮಗ್ರ ವಚನ ಸಾಹಿತ್ಯ:** ವಿಶ್ವದ ಮೂಲೆ ಮೂಲೆಯಲ್ಲಿರುವ ಅಸಕ್ತರು, ಓದುಗರು ಸಮಗ್ರ ವಚನ ಸಾಹಿತ್ಯವನ್ನು ಅಂತರ್‌ಜಾಲದ ಮೂಲಕ ಪಡೆಯಲು ಅನುಕೂಲವಾಗುವಂತೆ ಸಮಗ್ರ ವಚನ ಸಾಹಿತ್ಯವನ್ನು ಅಂತರ್‌ಜಾಲಕ್ಕೆ ಅಳವಡಿಸಲಾಗಿದೆ. ಆಧುನಿಕ ತಂತ್ರಜ್ಞಾನದ ಬೆಳಕಿನಲ್ಲಿ ಸಮಗ್ರ ವಚನ ಸಾಹಿತ್ಯವನ್ನು ವಿಶ್ವದಾದ್ಯಂತ ಪ್ರಚುರ ಪಡಿಸುವ ಕಾರ್ಯದ ಅಗತ್ಯಗಳನ್ನು ಮನಗಂಡ ಸರ್ಕಾರವು ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿದೆ. ಸಮಗ್ರ ವಚನಸಾಹಿತ್ಯವನ್ನು ಅಂತರ್‌ಜಾಲದ ಮೂಲಕ ಬಹುಮಾಧ್ಯಮ ರೂಪದಲ್ಲಿ ಜನರಿಗೆ ತಲುಪಿಸುವ ಕಲ್ಪನೆಯೇ ಒಂದು ರೋಮಾಂಚಕಾರಿಯಾದ ಸಂಗತಿ.

ಈ ಬೃಹತ್ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಕನ್ನಡ ತಂತ್ರಾಂಶದ ತೊಡಕನ್ನು ನಿವಾರಿಸಿಕೊಂಡು ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ) ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ, ವಿಷುಯಲ್ ಆರ್ಟ್ಸ್ ಮುಂತಾದ ಹಲವಾರು ಖಾಸಗಿ ತಂತ್ರಾಂಶಗಳ ಕಂಪನಿಯವರೊಂದಿಗೆ ಸಮಾಲೋಚಿಸಿ, ಒಂದು ಮಾದರಿ ಯೋಜನೆಯನ್ನು ರೂಪಿಸಲಾಗಿದೆ. ವಚನಗಳ ಮೊದಲ ಸಾಲುಗಳ ಅಕಾರಾದಿ ವಿಂಗಡಣೆ, ಕನ್ನಡ ಪಠ್ಯದ ಪ್ರದರ್ಶನ ಮುಂತಾದ ಸಮಸ್ಯೆಗಳನ್ನು ಪರಿಹರಿಸಿಕೊಂಡು ಒಂದು ಸಮರ್ಪಕವೆನ್ನಬಹುದಾದ ಕನ್ನಡ ತಂತ್ರಾಂಶವನ್ನು ರೂಪಿಸಿದ್ದಾರೆ.

ಈ ಬೃಹತ್ ಯೋಜನೆಯನ್ನು ಕರ್ನಾಟಕ ಸರ್ಕಾರದ ಉದ್ಯಮವಾದ ಎಂ.ಎಸ್.ಐ.ಎಲ್. ಸಂಸ್ಥೆಯ ಸಹಕಾರದಿಂದ ಅನುಷ್ಠಾನಗೊಳಿಸಲಾಗಿದೆ. ಇದೀಗ ಸಮಗ್ರ ವಚನ ಸಾಹಿತ್ಯವನ್ನು ವಿಶ್ವದಾದ್ಯಂತ ಆಸಕ್ತ ಜನ ತಾವಿರುವಲ್ಲಿಯೇ ವೀಕ್ಷಿಸುವ, ಪಠ್ಯವನ್ನು ಉಚಿತವಾಗಿ ಪಡೆದುಕೊಳ್ಳುವ ಹಾಗೂ ಆಲಿಸುವ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ಅದರ ಸಾರಾಂಶ ಹೀಗಿದೆ.

» ಸಮಗ್ರ ವಚನ ಸಾಹಿತ್ಯದ ಪಠ್ಯ ಮತ್ತು ಒಂದು ಸಾವಿರ ವಚನಗಳ ಗಾಯನವನ್ನು ಪ್ರಪ್ರಥಮ ಬಾರಿಗೆ ಅಂತರಜಾಲ ತಾಣದಲ್ಲಿ ಅಳವಡಿಸಲಾಗಿದೆ.

» ಅಂತರಜಾಲ ತಾಣದಲ್ಲಿ 249 ಜನ ವಚನಕಾರರ 21,674 ವಚನಗಳ ಪಠ್ಯವನ್ನು ಪ್ರಕಟಿಸಲಾಗಿದೆ.

» ವಚನಗಳಿಂದ ಆಯ್ದ 1000 ವಚನಗಳನ್ನು ವಿವಿಧ ಸಂಗೀತ ನಿರ್ದೇಶಕರಿಂದ ವಿವಿಧ ದಾಟಿಗಳಲ್ಲಿ ಸಂಯೋಜಿಸಿ, ವಿವಿಧ ಗಾಯಕರಿಂದ ಹಾಡಿಸಿ, ಧ್ವನಿ ಮುದ್ರಿಸಿ ಅಂತರ್‌ಜಾಲಕ್ಕೆ ಅಳವಡಿಸಲಾಗಿದೆ.

» ಆಸಕ್ತ ವ್ಯಕ್ತಿ ತನಗೆ ಬೇಕಾದ ವಚನಕಾರರ ವಚನದ ಪಠ್ಯವನ್ನು ಅಂತರ್‌ಜಾಲದಲ್ಲಿ ಆಯ್ದುಕೊಂಡು ಅದರ ಜೊತೆಗೆ ಸಂಗೀತವನ್ನು ಆಲಿಸಬಹುದಾಗಿದೆ. ಹೀಗೆ ಪಠ್ಯವನ್ನು ಏಕಕಾಲದಲ್ಲಿ ನೋಡುವ ಹಾಗೂ ಸಂಗೀತವನ್ನು ಆಲಿಸುವ ವಿಶೇಷತೆ ಇದೆ.

» ಅಂತರಜಾಲ ತಾಣದಲ್ಲಿ ನುಡಿ ಕನ್ನಡ ತಂತ್ರಾಂಶವನ್ನು ಬಳಸಲಾಗಿದೆ. ಗಣಕಯಂತ್ರಗಳಲ್ಲಿ ನುಡಿ ತಂತ್ರಾಂಶ ಇಲ್ಲದಿದ್ದರೂ ಪಠ್ಯವನ್ನು ಅಂತರ್‌ಜಾಲ ತಾಣದಲ್ಲಿ ನೋಡಲು ವಚನಗಳನ್ನು ಕೇಳಲು ಅವಕಾಶ ಕಲ್ಪಿಸಲಾಗಿದೆ.

» ಒಟ್ಟಾರೆ ವಚನಸಾಹಿತ್ಯದ 10,000 ಪುಟಗಳಷ್ಟು ವಚನಗಳನ್ನು ಅಳವಡಿಸಲಾಗಿದೆ.

» 249 ಜನ ವಚನಕಾರರ ಸ್ವ-ವಿವರಗಳನ್ನು ಅಳವಡಿಸಲಾಗಿದೆ.

» 21,674 ವಚನಗಳ ಅಕಾರಾದಿ ಪಟ್ಟಿಯನ್ನು ನೀಡಲಾಗಿದೆ.

» ವಚನಕಾರರ ಪಟ್ಟಿಯಲ್ಲಿ ಬೇಕೆನಿಸಿದ ವಚನಕಾರರನ್ನು ಆಯ್ಕೆ ಮಾಡಿದರೆ ಅವರ ವಚನಗಳ ಮೊದಲ ಸಾಲುಗಳು ಗೋಚರವಾಗುತ್ತದೆ.

» ಬೇಕಾದ ಮೊದಲ ಸಾಲಿನ ಮೇಲೆ ಕ್ಲಿಕ್ ಮಾಡಿದರೆ ವಚನದ ಪೂರ್ಣ ಪಠ್ಯ ದೊರೆಯುತ್ತದೆ. ಆ ವಚನಕ್ಕೆ ಸಂಗೀತ ರೂಪ ಇದ್ದರೆ ಧ್ವನಿವರ್ಧಕ ಚಿಹ್ನೆ ಕಾಣುತ್ತದೆ.

» ಧ್ವನಿವರ್ಧಕ ಚಿಹ್ನೆಯ ಮೇಲೆ ಕ್ಲಿಕ್ ಮಾಡಿದರೆ ವಚನ ಗಾಯನವನ್ನು ಕೇಳಬಹುದಾಗಿದೆ.

» ಸಮಗ್ರ ವಚನಸಾಹಿತ್ಯ ವೆಬ್‌ಸೈಟ್: vachanasahitya.kannadasiri.co.in

» ಈ ವೆಬ್‌ಸೈಟ್‌ನ್ನು www.kannadasiri.co.in ಗೆ ಅಳವಡಿಸಲಾಗಿದೆ.

ಬಹುಮಾಧ್ಯಮದಲ್ಲಿ ಸಮಗ್ರ ದಾಸಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರವಾಗಿ ರೂಪುಗೊಂಡಿದೆ ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಯೊಳಗಿರುವ ರಂಗಮಂದಿರಗಳ, ವೇದಿಕೆಗಳ ಅಗತ್ಯವಷ್ಟೇ ಸಾಲದು. ಭವಿತವ್ಯದಲ್ಲಿ ವಿಶ್ವದ ಜನರನ್ನು ತಲುಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ದಿಸೆಯಲ್ಲಿ ಇದೊಂದು ವಿನೂತನ ಪ್ರಯೋಗ.

ಹೀಗೆ ಇಂದು ತಂತ್ರಜ್ಞಾನ ಯುಗದಲ್ಲಿ ಸಾಹಿತ್ಯವನ್ನು ಆಸಕ್ತಿದಾಯಕವಾಗಿ ಬೋಧಿಸಲು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಂತರ್ಜಾಲದಲ್ಲಿ ಹಲವಾರು ಉಪಯುಕ್ತ ಮಾಹಿತಿಗಳಿವೆ. ಸರ್ಕಾರದ ಅಂತರ್‌ಜಾಲಗಳಲ್ಲದೆ 'ಪಂಜು', 'ಅವಧಿ' ಮುಂತಾದಂತಹ ಖಾಸಗಿ ವಾರಪತ್ರಿಕೆಗಳವರು ಸಹ ಕನ್ನಡದ ತಂತ್ರಜ್ಞಾನಕ್ಕೆ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಿದ್ದಾರೆ. ಹೀಗೆ ಹತ್ತು ಹಲವು ವಿಷಯಗಳಿಂದ

ತರಗತಿಯಲ್ಲಿ ಸಾಹಿತ್ಯ ಪಠ್ಯಗಳನ್ನು ಅತಿರಂಜಕತೆಯಿಂದ ಬೋಧಿಸಬಹುದು.

**ಮುಕ್ತಾಯ:**

ತರಗತಿಗಳಲ್ಲಿ ತಂತ್ರಜ್ಞಾನ ಮತ್ತು ಸಾಹಿತ್ಯದ ಏಕೀಕರಣವು ಸಾಂಪ್ರದಾಯಿಕ ಕಲಿಕೆಯ ಅನುಭವವನ್ನು ಮಾರ್ಪಡಿಸಿ, ಶಿಕ್ಷಣವನ್ನು ಹೆಚ್ಚು ಕ್ರಿಯಾತ್ಮಕ ಹಾಗೂ ಸಂವಾದಾತ್ಮಕವಾಗಿಸಿದೆ. ಅಲ್ಲದೆ ಸಾಹಿತ್ಯಕ ಸಂಪನ್ಮೂಲಗಳ ವ್ಯಾಪಕ ಶ್ರೇಣಿಯ ಪ್ರವೇಶವನ್ನು ಒದಗಿಸುತ್ತದೆ. ಮಲ್ಟಿಮೀಡಿಯಾ ಉಪಕರಣಗಳು ಸಾಹಿತ್ಯವು ವಿಮರ್ಶಾತ್ಮಕ ಚಿಂತನೆ, ಸಂವಹನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಆದರೆ ಸಮತೋಲನದ ಅವಶ್ಯಕತೆಯಿದೆ. ಸಾಹಿತ್ಯವು ನೀಡುವ ಶ್ರೀಮಂತ, ಪ್ರತಿಫಲಿತ ಅನುಭವಗಳಿಂದ ಗಮನವನ್ನು ಕೇಂದ್ರೀಕರಿಸುವ ಬದಲು ತಂತ್ರಜ್ಞಾನದ ಬೆಂಬಲವನ್ನು ಖಾತ್ರಿಪಡಿಸುತ್ತದೆ. ಈ ತಾಂತ್ರಿಕ ಭೂದೃಶ್ಯಕ್ಕೆ ಹೊಂದಿಕೊಳ್ಳುವ ಸಂದರ್ಭದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುವ ಸವಾಲು ಸಹ ಇರುತ್ತದೆ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.